Date : 24-9-2015

# ಬೇಳೆಕಾಳು ಮತ್ತು ಖಾದ್ಯತೈಲಗಳ ವೇರ್ ಹೌಸ್‌ಗಳಲ್ಲಿರುವ ದಾಸ್ತಾನು ಮಿತಿ ವಿನಾಯಿತಿಯ ಹಿಂತೆಗೆತ

ಭಾರತದಲ್ಲಿರುವ UDRA ನೊಂದಾಯಿತ ದಾಸ್ತಾನುಗಾರಗಳಲ್ಲಿ ದಾಸ್ತಾನಿರುವ ಬೇಳೆಕಾಳು ಮತ್ತು ಖಾದ್ಯತೈಲ ದಾಸ್ತಾನು ಮಿತಿ ವಿನಾಯಿತಿಯನ್ನು ಕೇಂದ್ರ ಸರಕಾರ ಹಿಂದೆಗೆದುಕೊಂಡಿದೆ. ಈ ದಾಸ್ತಾನುಗಾರಗಳಲ್ಲಿ ಬೃಹತ್ ಖಾಸಗಿ ಬೇಳೆಕಾಳು ದಾಸ್ತಾನಿರುವುದರಿಂದ, ಹಾಗೂ ಬೇಳೆಕಾಳು ಪೂರೈಕೆ ಬಿಗುವಿನ ಪರಿಸ್ಥಿತಿಯಿಂದಿರುವುದರಿಂದ ಈ ಕ್ರಮ ಅನಿವಾರ್ಯವೆನ್ನಲಾಗಿದ್ದು, ಬುಧವಾರ ಸರಕಾರಿ ನೋಟಿಫಿಕೇಶನ್‌ನ್ವಯ UDRA ನೋಂದಾಯಿತ ದಾಸ್ತಾನುಗಾರಗಳ ಸಹಿತ ದಾಸ್ತಾನಿರುವ ಬೇಳೆಕಾಳು ಮತ್ತು ಖಾದ್ಯತೈಲ ದಾಸ್ತಾನು ಮಿತಿ ವಿನಾಯಿತಿ ಹಿಂದೆಗೆಯಲ್ಪಟ್ಟಿದೆಯೆನ್ನಲಾಗಿದೆ. ಇದರಿಂದ UDRA ನೋಂದಾಯಿತ ಗೋಡನ್‌ಗಳ ಸಹಿತ ಎಲ್ಲಾ ಗೋಡೌನ್‌ಗಳ ದಾಸ್ತಾನುಗಳು ಹಾಗೂ ತೆರೆದ ಪ್ರದೇಶಗಳಲ್ಲಿರುವ ದಾಸ್ತಾನು, ರಾಜ್ಯಸರಕಾರಗಳ ದಾಸ್ತಾನುಮಿತಿಗೊಳಪಡಲಿದೆ. ಈ ಮೊದಲು ಮಂಗಳವಾರ ಬೇಳೆಕಾಳು ಹಾಗೂ ಖಾದ್ಯತೈಲ, ತೈಲಬೀಜಗಳ ಮೇಲಿನ ನಿಯಂತ್ರಣವನ್ನು ಕೇಂದ್ರ ಸರಕಾರ ಅಕ್ಟೋಬರ್ 1, 2015 ರಿಂದ ಸಪ್ಟೆಂಬರ್ 31, 2016 ರ ತನಕ ಒಂದು ವರ್ಷದ ಅವಧಿಗೆ ಮುಂದುವರಿಸಿದೆ. ಇದರನ್ವಯ ರಾಜ್ಯಸರಕಾರಗಳು ದಾಸ್ತಾನು ಮಿತಿ ಹೇರಬಹುದಾಗಿದ್ದು, ಉಲ್ಲಂಘನೆಯ ವಿರುದ್ಧ ಅವಶ್ಯಕ ವಸ್ತುಗಳ ಕಾಯಿದೆಯನ್ವಯ ಕ್ರಮ ಕೈಗೊಳ್ಳಬಹುದಾಗಿದೆ. ಇದರಿಂದ ಮಾರುಕಟ್ಟೆಗಳಲ್ಲಿ ಬೇಳೆಕಾಳುಗಳ ಲಭ್ಯತೆ ಹೆಚ್ಚಳವಾಗಿ ಮುಂದಿನ ದಿನಗಳಲ್ಲಿ ದರ ಇಳಿಕೆಯ ನಿರೀಕ್ಷೆ ಇದೆ. ಇದರನ್ವಯ ದೇಶೀ ಮಾರುಕಟ್ಟೆಗಳಲ್ಲಿ ರಾಜ್ಯ ಸರಕಾರಗಳ ಸಕಾಲಿಕ ಕ್ರಮಗಳಿಂದ ಸಾಕಷ್ಟು ಅವಶ್ಯಕ ವಸ್ತುಗಳ ಲಭ್ಯತೆಯಾಗಿ ದರ ನಿಯಂತ್ರಣಕ್ಕೆ ಸಹಾಯಕವಾಗಬಹುದೆನ್ನಲಾಗಿದೆ.